ಮಾಡಿದ್ದೇನೆ. ನಮ್ಮಲ್ಲಿ ಈಗ ಏನು ಕಟ್‌ಆಫ್ ಡೇಟ್ ಇದೆಯೋ ಆ ರೀತಿ ಅವರು ಅರೆಯುವುದಕ್ಕೆ, ಕೆಲವು ಫ್ಯಾಕ್ಟರಿಗೆ ಮಾರ್ಚ್ ಮೂವತ್ತು ಇದೆ. ಕೆಲವು ಶುಗರ್ ಫ್ಯಾಕ್ಟರಿಗಳಿಗೆ ಏಪ್ರಿಲ್ ಹದಿನೈದಕ್ಕೆ ಬರುತ್ತದೆ. ಇನ್ನು ಕೆಲವು ಶುಗರ್ ಫ್ಯಾಕ್ಟರಿಗಳಿಗೆ ಮೇ ಒಂದನೇ ತಾರೀಖಿನವರೆಗೆ ಇಲ್ಲಿ ಕರ್ನಾಟಕದಲ್ಲಿ ಅರೆಯುವುದಕ್ಕೆ ಮೂರು ಜೋನ್ ಮಾಡಿಕೊಂಡಿದ್ದಾರೆ. ಅವರು ಏನು ಹೇಳಿದ್ದಾರೆಂದರೆ, ಅಷ್ಟರೊಳಗೆ ಎಷ್ಟು ಸಾಧ್ಯವೋ ಅಷ್ಟನ್ನು ಅರೆಯುತ್ತೇವೆ ಎಂದು ಹೇಳಿದರು. ನಾವು ಟೋಟೆಲ್ ಅಸೆಸ್‌ಮೆಂಟ್ ಮಾಡಿರುವ ಪ್ರಕಾರ ಇನ್ನು ಹದಿನೈದರಿಂದ ಇಪ್ಪತ್ತು ಲಕ್ಷ ಟನ್ ಕಬ್ಬು ಮಾತ್ರ ಉಳಿಯಬಹುದು, ಅದಕ್ಕೆ ಒಂದು ತಿಂಗಳು ಎಕಸ್ಟಾ ಅರೆಯುವುದಕ್ಕೆ ಅವಕಾಶ ಮಾಡಿಕೊಡಿ ಎಂದು ನಾನು ಕೇಳಿದ್ದೇನೆ, ಅದಕ್ಕೆ ಅವರು ಒಪ್ಪಿಕೊಂಡಿದ್ದಾರೆ. ಆದರೆ ಒಂದೇ ಒಂದು ಇಳುವರಿ ಕಡಿಮೆಯಾಗುತ್ತದೆ, ಇಳುವರಿ ಕಡಿಮೆಯಾಗುವುದರಿಂದ ನಮಗೆ ನಷ್ಟವಾಗುತ್ತದೆ ದಯಮಾಡಿ, ಸರ್ಕಾರ ಅದಕ್ಕೇನಾದರೂ ಸ್ವಲ್ಪ ರಿಯಾಯಿತಿ ಕೊಡಬೇಕೆಂದು ಹೇಳಿದರು. ಈಗಾಗಲೇ ಈ ವರ್ಷ ಮೊದಲನೆ ಬಾರಿಗೆ ಸುಮಾರು ಇಪ್ಪತ್ತೆರಡು ಕೋಟಿ ರೂಪಾಯಿಗಳ ರಿಯಾಯಿತಿಯನ್ನು ಕೊಟ್ಟಿದ್ದೇವೆ. ಬಹುಶಃ ಇಂತಹ ಸನ್ನಿವೇಶ ಹಿಂದೆಂದೂ ಆಗಿದ್ದಲ್ಲ ಮತ್ತೆ ಕೂಡ ಹೇಳಿದ್ದೇವೆ, ಆ ಒಂದು ತಿಂಗಳ ಎಕಸ್ಟಾ ಅರೆಯತಕ್ಕ ಕಾಲದಲ್ಲಿ ನಾನು ಪರ್ಚೇಸ್ ಟ್ಯಾಕ್ಸ್ ಅನ್ನು ರಿಡಕ್ಷನ್ ಮಾಡುವುದಕ್ಕೆ ಸರ್ಕಾರದ ಅಧಿಕಾರಿಗಳ ಜೊತೆ ಈಗಾಗಲೇ ಚರ್ಚೆ ಮಾಡಿದ್ದೇನೆ. ಇನ್ನು ಒಂದೆರಡು ದಿನಗಳಲ್ಲಿ ನಿರ್ಣಯ ತೆಗೆದುಕೊಂಡು ಈ ಸದನದಲ್ಲಿ ಪ್ರಕಟಣೆ ಮಾಡುತ್ತೇನೆ. ಆ ಆಶ್ವಾಸನೆಯಿಂದ ಅವರು ಒಂದು ತಿಂಗಳಲ್ಲಿ extra ಅರೆದು ಇಡೀ ಹದಿನೆಂಟರಿಂದ ಇಪ್ಪತ್ತು ಲಕ್ಷ ಟನ್ ಕಬ್ಬು ಏನು ಎಕಸ್ಟಾ ಉಳಿಯುತ್ತದೋ ಅದನ್ನು ನಾವು ಅರೆದು ಕೊಡುತ್ತೇವೆಂದು ಹೇಳಿದ್ದಾರೆ. ಇಷ್ಟನ್ನು ನಾನು ಈ ಸಭೆಯ ಗಮನಕ್ಕೆ ತರುವುದಕ್ಕೆ ಇಚ್ಛಿಪಡುತ್ತೇನೆ.

ಅಧ್ಯಕ್ಷರು : ಪುಟ್ಟಣ್ಣಯ್ಯನವರು, ತಾವು ಒಂದು ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ಅನುಮತಿಯನ್ನು ಕೇಳಿದಿರಿ, ಇನ್ನೊಂದು ಐದು ನಿಮಿಷವಿದೆ, ಅಲ್ಲಿಗೆ ತಾವು ಒಂದು ಗಂಟೆಯನ್ನು ಪೂರ್ಣ ಉಪಯೋಗಿಸಿಕೊಂಡಂತೆ ಆಗುತ್ತದೆ, ಸಂಕ್ಷಿಪ್ತವಾಗಿ ಪ್ರಸ್ತಾಪ ಮಾಡಿ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಸನ್ಮಾನ್ಯ ಸಭಾಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಸಭಾ ನಾಯಕರು ಕಬ್ಬಿನ ಸಮಸ್ಯೆಯ ಬಗ್ಗೆ ಮಾತನಾಡುತ್ತಾ ಬೆಳಗಾಂ...

ಅಧ್ಯಕ್ಷರು : ತಾವು ಕಬ್ಬಿನ ಬೆಳೆಯ ಬಗ್ಗೆ ಪ್ರಸ್ತಾಪ ಮಾಡುತ್ತೀರೋ ಅಥವಾ ಬೇರೆ ಇನ್ನೊಂದು...

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಒಂದೇ ಒಂದು ನಿಮಿಷದಲ್ಲಿ ಹೇಳಿಬಿಡುತ್ತೇನೆ.

ಅಧ್ಯಕ್ಷರು : ಇಲ್ಲ, ಅದು ಕಷ್ಟವಾಗುತ್ತದೆ, ತಾವು ಯಾವುದೋ ಇನ್ನೊಂದು ವಿಚಾರ ಹೇಳಿದಿರಿ.

ಈ) ವೃತ್ತಿಶಿಕ್ಷಣ ನೌಕರರಿಂದ ಸತ್ಯಾಗ್ರಹ.

+ಶ್ರೀ ಕೆ. ಎಸ್. ಪುಟ್ಟಣ್ಣಯ್ಯ : ಆಯಿತು ಸಾರ್. ಏಕೆಂದರೆ ಪತ್ರಿಕೆಯನ್ನು ಓದುವುದರ ಮೂಲಕ ಮಹಾರಾಷ್ಟ್ರದ ಸರ್ಕಾರ ಅಲ್ಲಿರತಕ್ಕಂಥ ಕಬ್ಬು ಮುಗಿದ ಮೇಲೆ, ಮುಕ್ತಾಯವಾದ ಮೇಲೆ ನಮ್ಮ ಕಬ್ಬನ್ನು ಅರೆಯುವಂಥ ಒಂದು ಆಲೋಚನೆ ಮಾಡಿರುವುದರಿಂದ ಈಗ ತತ್‌ಕ್ಷಣದಲ್ಲಿ

ಗಡಿಯಲ್ಲಿರತಕ್ಕಂಥ ಹದಿನೈದು-ಹದಿನಾರು ಕಾರ್ಖಾನೆಗಳು ಕನಿಷ್ಟ ದಿವಸಕ್ಕೆ ಒಂದು ಇಪ್ಪತ್ತು ಲೋಡ್ ಕಬ್ಬನ್ನು, ಇನ್ನೂರು ಟನ್ ಕಬ್ಬನ್ನು ಅರೆಯತಕ್ಕಂಥ ಒಂದು ಕೆಲಸವನ್ನು ಪ್ರಾರಂಭ ಮಾಡಿದರೆ, ನಮ್ಮ ಕಬ್ಬಿನ ಸಮಸ್ಯೆ ಕನಿಷ್ಟ ಸ್ವಲ್ಪ ಕಡಿಮೆಯಾಗಬಹುದು ಎನ್ನತಕ್ಕ ಒಂದು ಸಲಹೆಯನ್ನು ಕೊಟ್ಟಿದ್ದೇನೆ. ಅದನ್ನು ಆಲೋಚನೆ ಮಾಡುವುದು ಸೂಕ್ತ. ಏಕೆಂದರೆ, ಒಂದೇ ಸಾರಿ ನಮ್ಮಲಕ್ಷಾಂತರ ಟನ್ ಕಬ್ಬನ್ನು ತೆಗೆದುಕೊಂಡು ಅರೆಯುವುದಕ್ಕಿಂತ ಕನಿಷ್ಟ ಒಂದು ಕಾರ್ಖಾನೆ ಇನ್ನೊಂದು ಟನ್ ತೆಗೆದುಕೊಳ್ಳತಕ್ಕ ಕೆಲಸ ಮಾಡಿದರೆ ಮೂರಿಂದ ನಾಲ್ಕು ಸಾವಿರ ಟನ್ ಕಬ್ಬು ದಿವಸ ಸರಬರಾಜು ಆಗತಕ್ಕ ಒಂದು ವ್ಯವಸ್ಥೆಯಾಗುತ್ತದೆ. ಇನ್ನೊಂದು ಬಹಳ ಪ್ರಮುಖವಾದ ವಿಷಯ ಈಗಾಗಲೇ ಸರ್ಕಾರದ ಗಮನಕ್ಕೆ ಬಂದಿದೆ. ಅದೇನೆಂದರೆ ಹದಿನೈದು ಜನ ವೃತ್ತಿ ಶಿಕ್ಷಣ ನೌಕರರು ಆಸ್ಪತ್ರೆಗೆ ಸೇರಿರತಕ್ಕ ಒಂದು ವಿಚಾರ ಇವತ್ತಿನ ಪತ್ರಿಕೆಯ ಮೂಲಕ ಇಡೀ ರಾಜ್ಯದ ಜನತೆಗೆ, ಸರ್ಕಾರಕ್ಕೆಲ್ಲಾ ತಿಳಿದಿದೆ. ಅದರಿಂದ ಈಗಾಗಲೇ ಸರ್ಕಾರ ಮಧ್ಯ ಪ್ರವೇಶ ಮಾಡಿ, ಅವರನ್ನು ಕರೆಯಿಸಿ ಮಾತುಕತೆ ನಡೆಸುವುದರ ಮೂಲಕ ಅವರ ಸಮಸ್ಯೆಯನ್ನು ಬಗೆಹರಿಸುತ್ತೇವೆಂದು ಹೇಳಿ, ಸುಮಾರು ಎಂಭತ್ತು ಸಾವಿರ ವಿದ್ಯಾರ್ಥಿಗಳ ಉದ್ಯೋಗ ಶಿಕ್ಷಣದ ಬಗ್ಗೆ ಬಾರಿ ಅನುಕೂಲವಾಗಿರುವ ಬಗ್ಗೆ ಸರ್ಕಾರ ಇದುವರೆವಿಗೂ ಯಾವುದೇ ತೀರ್ಮಾನ ಮಾಡಿಲ್ಲ. ಸರ್ಕಾರದ ನಿಲುವೇನು ಎಂದು ಹೇಳುವುದಕ್ಕೆ ಮೊದಲು ಪ್ರಯತ್ನವೂ ಪಟ್ಟಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ, ವೃತ್ತಿ ಶಿಕ್ಷಣ ಇಲಾಖೆಯಲ್ಲಿ ಹತ್ತು ವರ್ಷ ಸೇವೆ ಸಲ್ಲಿಸಿದವರನ್ನು ಸೇವೆಯಲ್ಲಿ ಖಾಯಂ ಮಾಡಬೇಕೆಂದು ಸುಪ್ರೀಂ ಕೋರ್ಟಿನ ತೀರ್ಪು ಸರ್ಕಾರದ ಗಮನಕ್ಕೆ ಬಂದಿದ್ದು, ಇಡೀ ಪರಿಸ್ಥಿತಿಯನ್ನು ಅಭ್ಯಾಸ ಮಾಡಿ ಮೂರು ತಿಂಗಳೊಳಗೆ ಅಖೈರು ನಿರ್ಧಾರ ಕೈಗೊಳ್ಳುವಂತೆ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಮಂತ್ರಿಗಳಿಗೆ ಸೂಚಿಸಿದೆ ಎಂದು ಸ್ಪಷ್ಟಪಡಿಸಿದರು. ಅವರು ಯಾವಾಗ ಹೇಳಿದರು ಎಂದರೆ, ಅಧಿಕಾರಕ್ಕೆ ಬಂದಾಗ ಹೇಳಿದರು. ಮೊದಲನೆ ಚಳುವಳಿ ಮಾಡಿದಾಗ ಈ ಮಾತನ್ನು ಹೇಳಿದರು. ಈಗಾಗಲೇ ಸುಮಾರು ಒಂಭತ್ತು ತಿಂಗಳುಗಳಾಗಿಯೂ ಯಾವುದೇ ಪರಿಣಾಮಕಾರಿಯಾದ ತೀರ್ಮಾನವಾಗಿಲ್ಲ. ಅದರ ಬಗ್ಗೆ ಅತ್ಯಂತ ತ್ವರಿತವಾಗಿ, ಜವಾಬ್ದಾರಿಯುತವಾಗಿ ತೀರ್ಮಾನ ಮಾಡಿ. ಸರ್ಕಾರಕ್ಕೆ ಈಗಾಗಲೇ ಅಂಕಿಅಂಶಗಳನ್ನು ಕೊಟ್ಟಿದ್ದಾರೆ, ಪೂರ್ತಿ ಏಳು ಸಾವಿರ ಟೀಚ್ಲರೆ ಜನ ಶಿಕ್ಷಕರು ಏನಿಲ್ಲ, ಬಹಳ ಕಡಿಮೆ ಪ್ರಮಾಣದಲ್ಲಿರುವುದು. ಈಗಾಗಲೇ ಜಿಲ್ಲಾವಾರು ಸಮೀಕ್ಷೆ ಸರ್ಕಾರಕ್ಕೆ ತಲುಪಿರಬೇಕು, ಆದುದರಿಂದ ದಯವಿಟ್ಟು ಸರ್ಕಾರ ಅತ್ಯಂತ ಗಂಭೀರವಾಗಿ ಇದನ್ನು ಪರಿಗಣಿಸಿ ವೃತ್ತಿ ಶಿಕ್ಷಣದ ಏನು ಈ ನೌಕರರು ಇದ್ದಾರೆ ಅವರ ಸಮಸ್ಯೆಯನ್ನು ಬಗೆಹರಿಸಿಕೊಡಬೇಕೆಂದು ಸಭಾಧ್ಯಕ್ಷರ ಮೂಲಕ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ.

12.00 ಪಿ.ಎಂ.

ಶ್ರೀ ಬಿ.ಎಸ್. ಯಡಿಯೂರಪ್ಪ : ಉಪಾಧ್ಯಕ್ಷರೇ, ನಾನು ಆಸ್ಪತ್ರೆಗೆ ಹೋಗಿ ಬಂದೆ. 13 ಜನ ತುಂಬಾ ವಿಚಿತ್ರವಾದ ಸ್ಥಿತಿಯಲ್ಲಿದ್ದಾರೆ. ಸರ್ಕಾರ ಆಶ್ವಾಸನೆ ಕೊಟ್ಟಿತ್ತು, ಅವರನ್ನು ಕರೆಯಿಸಿ, ಮಾತನಾಡಿ ನಾನು ಈ ಸಮಸ್ಯೆಯನ್ನು ಬಗೆಹರಿಸುತ್ತೇವೆ ಎಂದು. 10 ವರ್ಷ ಸೇವೆಯನ್ನು ಮಾಡಿದಂಥವರಿಗೆ ಖಾಯಂ ಮಾಡುತ್ತೇವೆನ್ನುವಂಥ ಭರವಸೆಯನ್ನು ಕೊಟ್ಟಿದ್ದರಿ. ವೃತ್ತಿ ಶಿಕ್ಷಣ

ಸಂಸ್ಥೆಯಲ್ಲಿ, ಕೆಲಸ ಮಾಡುವಂಥ ನೌಕರರು ಏನು ಸತ್ಯಾಗ್ರಹ ಮಾಡುತ್ತಿದ್ದಾರೆ, ಅವರಲ್ಲಿ 13 ಜನ ಈಗಾಗಲೇ ಆಸ್ಪತ್ರೆಯಲ್ಲಿ, ಜೀವನಮರಣದ ಪ್ರಶ್ನೆಯಲ್ಲಿ, ಆತಂಕಕಾರಿಯಾದ ಒಂದು ಸ್ಥಿತಿಯಲ್ಲಿ ಇದ್ದಾರೆ. ಅವರ ಸತ್ಯಾಗ್ರಹ ಮುಂದುವರಿಯುತ್ತಿದೆ. ದಯಮಾಡಿ ಅವರನ್ನು ಕರೆಯಿಸಿ ಮಾತುಕತೆಯಾಡಿ ಸಮಸ್ಯೆಯನ್ನು ಬಗೆಹರಿಸುತ್ತೇವೆ ಎನ್ನುವಂಥ ಆಶ್ವಾಸನೆಯನ್ನೂ ತಾವು ಕೊಟ್ಟಿದ್ದೀರಿ. ಕೊನೆಯ ಪಕ್ಷ 10 ವರ್ಷ ಸೇವೆ ಮಾಡಿರುವಂಥಾವವರನ್ನು ಖಾಯಂ ಮಾಡುವಂಥ ನಿರ್ಧಾರ ತಾವು ಮಾಡಬೇಕು ಮತ್ತು ಈ ಬಗ್ಗೆ ಸರ್ಕಾರ ತನ್ನ ನಿರ್ಧಾರ ಸ್ಪಷ್ಟ ಮಾಡದಿದ್ದರೆ, ಈಗಾಗಲೇ ಅನೇಕ ಜನ ಹಗಲು ರಾತ್ರಿ ದುಡಿಯುತ್ತಾ ಇರತಕ್ಕಂಥ ನೌಕರ ವರ್ಗದವರು ಆಸ್ಪತ್ರೆ ಸೇರುತ್ತಿದ್ದಾರೆ. ಅವರ ಸ್ಥಿತಿ ಚಿಂತಾಜನಕವಾಗಿದೆ. ನಾನೂ ಸಹ ಮೊನ್ನೆ ಬೌರಿಂಗ್ ಆಸ್ಪತ್ರೆಗೆ ಹೋಗಿ ಬಂದೆ. ನಿಮ್ಮಲ್ಲೂ ಆ ಮಾಹಿತಿ ಇರಬಹುದು. ದಯಮಾಡಿ, ಇದರ ಬಗ್ಗೆ ಸರ್ಕಾರದ ನಿರ್ದಿಷ್ಟವಾದಂಥ ನಿಲುವೇನು, ನಿರ್ಧಾರ ಏನು ಎನ್ನುವುದನ್ನು ತಿಳಿಸಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ : ನನಗೆ ತಿಳಿದ ಮಟ್ಟಿಗೆ ಇದುವರೆಗೆ ಕರೆದು ಮಾತನಾಡಿಲ್ಲ. ಮಾನ್ಯ ಸಚಿವರು ಅವರನ್ನು ಕರೆದು ಮಾತನಾಡಲಿ. ಮಾತನಾಡಿ, ಅವರ ಸಮಸ್ಯೆ ಏನು ಎನ್ನುವಂಥಾದ್ದನ್ನು ಕೇಳಿ, ಆ ಸಮಸ್ಯೆಗೆ ಯಾವತ್ತು ಪರಿಹಾರ ಕಂಡುಹಿಡಿಯುತ್ತೇವೆ ಎಂದು ಹೇಳಿದರೆ, ಒಂದು ಮಾರ್ಗ ಹುಡುಕಬೇಕು ಎಂದು ನಾನು ಮಾನ್ಯ ಸಚಿವರಲ್ಲಿ ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ. ಇಲ್ಲದಿದ್ದರೆ, ಈಗಾಗಲೇ ಬಹಳ ಜನ ಆಸ್ಪತ್ರೆಗೆ ಸೇರಿದ್ದು ಪರಿಸ್ಥಿತಿ ಬಹಳ ಗಂಭೀರವಾಗಿದೆ. ಆದ್ದರಿಂದ ಸರ್ಕಾರ ಇದರ ಕಡೆಗೆ ತೀವ್ರವಾದ ಗಮನ ಕೊಡಬೇಕು ಎಂದು ಹೇಳಿ ನಾನು ತಮ್ಮ ಮೂಲಕ ಬಹಳ ಒತ್ತಾಯ ಮಾಡುತ್ತಿದ್ದೇನೆ, ಸ್ವಾಮಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಸನ್ಮಾನ್ಯ ಉಪಾಧ್ಯಕ್ಷರೆ, ನಾನು ಕಳೆದ 3 ದಿವಸದ ಹಿಂದೆ ಇದೇ ವಿಷಯದ ಬಗ್ಗೆ ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿದಾಗ ಮಾನ್ಯ ವಿದ್ಯಾ ಸಚಿವರು ಇರಲಿಲ್ಲ. ಆವತ್ತು ಅವರು ಈ ಸಭೆಗೆ ಆಶ್ವಾಸನೆ ಕೊಟ್ಟರು, ನಾವು ಅವರನ್ನು ಕರೆದು ಮಾತನಾಡಿ, ಅದನ್ನು ಪರಿಶೀಲನೆ ಮಾಡಿ, ಸಮಸ್ಯೆಯನ್ನು ಪರಿಹಾರ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇನೆ ಎಂದು ಹೇಳಿದ್ದರು. ನನಗೆ ತಿಳಿದ ಮಟ್ಟಿಗೆ ಅವರು ಕರೆದು ಮಾತನಾಡಿದ್ದಾರೆ. ಆದರೆ ಮಾತನಾಡಿದರೂ ಕೂಡ ಸಮಸ್ಯೆ ಪರಿಹಾರ ಮಾಡಲಿಕ್ಕೆ ಸರ್ಕಾರ ಮಧ್ಯ ಪ್ರವೇಶ ಮಾಡಿ ಅವರು ಮಾಡುತ್ತಿರತಕ್ಕಂಥ ಮುಷ್ಕರವನ್ನು ಹಿಂದಕ್ಕೆ ಪಡೆಯತಕ್ಕಂಥ ರೀತಿಯಲ್ಲಿ ಏನೂ ಪ್ರಯತ್ನ ನಡೆದಿಲ್ಲ. ಸರ್ಕಾರ ಅದರ ಬಗ್ಗೆ ತನ್ನ ನಿಲುವು ಏನು ಎನ್ನುವುದನ್ನೂ ಕೂಡ ಸ್ಪಷ್ಟ ಮಾಡಿಲ್ಲ. ಮಧ್ಯ ಪ್ರವೇಶ ಮಾಡಬೇಕು. 15 ಜನ ಆಸ್ಪತ್ರೆಯಲ್ಲಿದ್ದಾರೆ. ತಾವು ಸಮಸ್ಯೆ ಪರಿಹಾರ ಮಾಡುತ್ತೀರೋ ಅಥವಾ ಇಲ್ಲವೋ? ಮಾಡುವ ಹಾಗಿದ್ದರೆ, ನಾವು ಈ ರೀತಿಯಲ್ಲಿ ಮಾಡಲಿಕ್ಕೆ ಸಾಧ್ಯವಾಗುತ್ತದೆ ಎಂದು ಹೇಳಿ ಸರ್ಕಾರ ಮಧ್ಯ ಪ್ರವೇಶ ಮಾಡಬೇಕಾಗಿದೆ. ಈ ಮುಷ್ಕರವನ್ನು ಹಿಂದಕ್ಕೆ ಪಡೆಯತಕ್ಕಂಥ ರೀತಿಯಲ್ಲಿ ಸರ್ಕಾರ ಪ್ರಯತ್ನ ಮಾಡದೇ ಹೋದರೆ, ಎಷ್ಟು ದಿವಸ ಮುಷ್ಕರ ನಡೆಯುತ್ತಿದ್ದರೂ, ನಮಗೆ ಸಂಬಂಧವಿಲ್ಲ, ನಮಗೆ ಗೊತ್ತಿಲ್ಲ ಎನ್ನುವಂಥ ರೀತಿಯಲ್ಲಿ ವರ್ತನೆ ಮಾಡತಕ್ಕಂಥಾದ್ದು ಸರಿಯಲ್ಲ. ಸರ್ಕಾರ ತಕ್ಷಣ ಮಧ್ಯ ಪ್ರವೇಶ ಮಾಡಿ

ಮುಷ್ಕರವನ್ನು ವಾಪಸ್ಸು ಪಡೆಯುವ ರೀತಿಯಲ್ಲಿ ಪ್ರಯತ್ನ ಮಾಡಿ ಅವರ ಸಮಸ್ಯೆಯನ್ನು ಪರಿಹಾರ ಮಾಡಲಿಕ್ಕೆ ಪ್ರಾಮಾಣಿಕವಾದಂಥ ಒಂದು ಪ್ರಯತ್ನ ಮಾಡಬೇಕು ಎಂದು ಹೇಳಿ ನಾನು ತಮ್ಮ ಮುಖಾಂತರ ಸರ್ಕಾರವನ್ನು ಕೇಳುತ್ತಿದ್ದೇನೆ.

+ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) : ಮಾನ್ಯ ಉಪಾಧ್ಯಕ್ಷರೇ, ಈ ವಿಷಯ ಸರ್ಕಾರದ ಗಮನದಲ್ಲಿದೆ. ಆದರೆ ಒಂದನ್ನು ನಾನು ತುಂಬಾ ನೋವಿನಿಂದ ಹೇಳಬೇಕಾಗುತ್ತದೆ. ಇದು ನಿನ್ನೆ ಮೊನ್ನೆ ವಿಷಯ ಅಲ್ಲ. ಒಂದು ವರ್ಷ 2 ತಿಂಗಳು ಈ ಸರ್ಕಾರದ ಆಯಸ್ಸು. ನಾನು ಒಬ್ಬನೇ ಇಲ್ಲಿಯವರೆಗಿನ ಅವಧಿ ಮುಗಿಸಿದ್ದೇನೆ. ಒಂದು ವಾತಾವರಣ ನಿರ್ಮಾಣವಾಗುತ್ತಿದೆ, ವಿದ್ಯಾ ಇಲಾಖೆಗೆ ಸಂಬಂಧಪಟ್ಟಂತೆ ಹಲವಾರು ಸಮಸ್ಯೆಗಳಿವೆ, ಎಲ್ಲರೂ ಆಮರಣಾಂತ ಉಪವಾಸವನ್ನು ಮಾಡುತ್ತೇವೆ ಎಂದು ಹೊರಟಾಗ, ಅದನ್ನು ಒಂದೇ ಸಾರಿ ನಾನು ಬಗೆಹರಿಸಲಿಕ್ಕೆ ಸಾಧ್ಯವಾಗುವುದಿಲ್ಲ. ದಯಮಾಡಿ ಸದನದ ಎಲ್ಲಾ ಕಡೆ ಗೌರವಾನ್ವಿತ ಸದಸ್ಯರಲ್ಲಿ ವಿನಂತಿ ಮಾಡುತ್ತೇನೆ, ಈ ಅನುದಾನ ರಹಿತವಾಗಿರತಕ್ಕಂಥ ಸಂಸ್ಥೆಗಳಲ್ಲಿ ಕೆಲಸ ಮಾಡತಕ್ಕಂಥವರದು ಇವತ್ತು ಅತ್ಯಂತ ಕಠಿಣ ಸಮಸ್ಯೆಯಾಗಿದೆ. ಶಾಶ್ವತ ಅನುದಾನ ಬೇಕಿಲ್ಲ ಎಂದು ಬರೆದು ಕೊಟ್ಟರು, ಮ್ಯಾನೇಜಮೆಂಟಿನವರು ಮತ್ತು ಸ್ಕೂಲುಗಳನ್ನು ತೆಗೆದುಕೊಂಡು. ಅದು ಕಾಲೇಜು ಇರಬಹುದು, ಸ್ಕೂಲು ಇರಬಹುದು, ಮತ್ತೊಂದು ಇರಬಹುದು, ತೆಗದುಕೊಂಡಿದ್ದಾರೆ. ಏಳು ವರ್ಷ ಅನುದಾನ ಬೇಡ ಎಂದು ಹೇಳಿ ಪರವಾನಿಗೆ ತೆಗೆದುಕೊಂಡರು, ನಮಗೆ ಗ್ರಾಂಟ್ ಬೇಡ ಎಂದು ಅಗ್ರೀಮೆಂಟ್ ಮಾಡಿಕೊಂಡರು. ಈಗ ಅವರು ನಮಗೆ ಗ್ರಾಂಟ್ ಸಿಗುತ್ತಿಲ್ಲ, ನಮಗೆ ಮಕ್ಕಳು ಆಗಿದ್ದಾವೆ ಮೊಮ್ಮಕ್ಕಳು ಆಗಿದ್ದಾವೆ. ನಮ್ಮ ಗತಿ ಏನು ಎಂದು ಇಲ್ಲಿ ಸುತ್ತುತ್ತಿದ್ದಾರೆ. ಸನ್ಮಾನ್ಯ ಉಪಾಧ್ಯಕ್ಷರೇ, ಶಾಲೆಗಳನ್ನು ತೆಗೆದುಕೊಳ್ಳುವಾಗ ಖಾಸಗಿ ಸಂಸ್ಥೆಯವರು ನಾನಾ ರೀತಿಯಾದಂಥ ವ್ಯಾಮೋಹಗಳಿಗೆ ಒಳಪಡಿಸಿ, ಯಾರನ್ನು ಅಲ್ಲಿ ಅಪಾಯಿಂಟ್ ಮಾಡಿಕೊಂಡಿದ್ದಾರೆ, ಆ ಹುಡುಗರುಗಳ ಹತ್ತಿರವೆಲ್ಲಾ 50 ಸಾವಿರ, ಒಂದು ಲಕ್ಷ ತೆಗೆದುಕೊಂಡು ಅಪಾಯಿಂಟ್ ಮಾಡಿಕೊಂಡಿದ್ದಾರೆ. ಸುಮಾರು ಮೂರು ಸಾವಿರ ಚಿಲ್ಲರೆ ಇಂಥ ಅನುದಾನರಹಿತ ಸಂಸ್ಥೆಗಳಿವೆ. ಶಾಶ್ವತ ಅನುದಾನ ರಹಿತ ಮತ್ತು 7 ವರ್ಷ ಅನುದಾನ ರಹಿತ ಎಂದು. ಈಗ ಅವರೆಲ್ಲರೂ ಇಲ್ಲಿ ವಿಧಾನ ಸಭೆಯ ಕಾರ್ಯಕಲಾಪ ಶುರುವಾದ ತಕ್ಷಣ ಇಲ್ಲಿ ಬಂದು ಕುಳಿತುಕೊಂಡಿದ್ದಾರೆ. ಆಮರಣಾಂತ ಉಪವಾಸ ಮಾಡುತ್ತೇವೆ ಎಂದು ಹೇಳಿದ್ದಾರೆ. ಅರೆಕಾಲಿಕ ಉಪನ್ಯಾಸಕರು, ಒಂದು ಪೀರಿಯಡ್‌ಗೆ ಒಬ್ಬ ಅರೆಕಾಲಿಕ ಉಪನ್ಯಾಸಕ. ಇದು ತಮಗೇ ಗೊತ್ತಿದೆ, ತಾವು ಸರ್ಕಾರ ನಡೆಸಿರುವವರು ಅಥವಾ ಸರ್ಕಾರ ನಡೆಸತಕ್ಕಂಥ ಈ ಸದನದ ಅನುಭವ ಇರುವವರು. ಒಂದು ಪೀರಿಯಡ್‌ಗೆ ಒಬ್ಬ ಪಾರ್ಟ್‌ಟೈಮ ಲೆಕ್ಚರರ ಇದ್ದರೆ ಅವನನ್ನೂ ಕನಫರ್ಮ್ ಮಾಡಬೇಕು ಎಂದು ಹೇಳುತ್ತಿದ್ದಾರೆ. ನಾವು ಇದೆಲ್ಲದರ ಬಗ್ಗೆ ಲೆಕ್ಕಾಚಾರ ಮಾಡಿಸಿದೆವು. ಈಗ ನೀವು ಏನು ಹೇಳುತ್ತಿದ್ದೀರಲ್ಲ, ಇವರು ನಮ್ಮ ಒಂದು ಹೊಸ ಕೋರ್ಸ್ ಇದೆ. ಜೆ.ಓ.ಸಿ. ಎಂದು, ವೃತ್ತಿ ಪರ ಶಿಕ್ಷಣ. ಇದೂ ಒಂದು ವರ್ಗ. ಅಲ್ಲಿ 10 ವರ್ಷ ಸೇವೆ ಮಾಡಿರುವವರನ್ನು ಕನಫರ್ಮ ಮಾಡಬೇಕು ಎನ್ನುವುದು ಒಂದು. ಇನ್ನೊಂದು, ಅವರನ್ನು ನೀವು ಏಕೆ ಮಾಡುತ್ತೀರಿ ನಮ್ಮನ್ನೂ ಮಾಡಿ ಎಂದು 5 ವರ್ಷ, 6 ವರ್ಷ, 7 ವರ್ಷ ಕೆಲಸ ಮಾಡಿರುವವರದೊಂದು ಬೇಡಿಕೆ. ಸನ್ಮಾನ್ಯ ಉಪಾಧ್ಯಕ್ಷರೇ, ನಾವು ಎಲ್ಲಿಗೆ

ಬಂದಿದ್ದೇವೆ. ಬರೀ ವಿದ್ಯಾ ಇಲಾಖೆಗೆ ಸಂಬಂಧಪಟ್ಟ ಈ ಬೇಡಿಕೆಗಳನ್ನು ನಾವು ಈಡೇರಿಸುತ್ತೇವೆ ಎಂದು ಹೇಳಿದರೆ, ಆಗಿದ್ದ ಸರ್ಕಾರ ಯಾವ ಕಾರಣಕ್ಕಾದರೂ ಮಾಡಲಿ, ಕೆಲವು ಸಂಸ್ಥೆಗಳಿಗೆ ಗ್ರಾಂಟನ್ನು ಕೊಟ್ಟು, ಹದಿನೈದೋ, ಹದಿನೆಂಟೋ, ಇಪ್ಪತ್ತೋ ಸಂಸ್ಥೆಗಳಿಗೆ ಕೊಟ್ಟಿದ್ದಾರೆ. ಹಾಗೆ ಕೊಡುವಾಗ ಏನು ಮಾಡಿದರು; ನಾನಟೀಚಿಂಗ್ ಸ್ಟಾಫಗೆ ಕೊಡಲಿಲ್ಲ. ಟೀಚಿಂಗ್ ಸ್ಟಾಫಗೆ ಕೊಟ್ಟಿದ್ದಾರೆ. ಆದ್ದರಿಂದ ಅವರೆಲ್ಲಾ ಇಲ್ಲಿ ಬಂದು ಸುಮಾರು 500 ಕೋಟಿ ರೂಪಾಯಿ ನಾವು ಈ ಒಂದು ಬಾಬಿಗೆ ಕೊಡಬೇಕಾಗುತ್ತದೆ. ಇಲ್ಲಿ ನಮ್ಮ ಹಿರಿಯ ಸದಸ್ಯರಾಗಿರತಕ್ಕಂಥ ಮಾಜಿ ಮಂತ್ರಿಗಳು ಇಲ್ಲಿ ಡಿಸ್ಕಷನಗೆ ಹಾಕಿದ್ದಾರೆ, ಯು.ಕೆ.ಪಿ. ಬಗ್ಗೆ, ನೀವು ಏನು ಹೇಳಿದಿರಿ, ಏನು ಮಾಡಿದಿರಿ ಎಂದು. ಅದನ್ನು ಇವತ್ತೋ, ನಾಳೆನೋ ಡಿಸ್ಕಷನ ಮಾಡೋಣ. ಈ ಒಂದೇ ಒಂದು ಇಲಾಖೆಯ ಸ್ಟೇಟಮೆಂಟನ್ನು ನಿಮ್ಮ ಮುಂದೆ ಇಡುತ್ತಿದ್ದೇನೆ. ಇವತ್ತು ಸರ್ಕಾರ, ಇದನ್ನು ಸ್ವೀಕಾರ ಮಾಡುತ್ತದೆ ಎಂದು ಹೇಳಿದರೆ, ಸರ್ಕಾರ ಪುರಸ್ಕಾರ ಮಾಡಿದರೆ, ಅಷ್ಟು ಹಣ ಬೇಕಾಗುತ್ತದೆ. ಸರ್ಕಾರಕ್ಕೆ ಹೃದಯ ಇದೆ, ಕಣ್ಣು ಇದೆ, ಕಿವಿ ಇದೆ, ಎಲ್ಲಾ ತಿಳಿದುಕೊಳ್ಳುತ್ತೇವೆ. ಹೇಗೆ ಮಾಡಬೇಕು? ಇದು ಇರತಕ್ಕಂಥ ನಮ್ಮ ನೋವು. ಇದು ನಮ್ಮೆಲ್ಲರ ನೋವು. ಇದು ನನ್ನದೇನೂ ವೈಯಕ್ತಿಕವಾಗಿ ದೇವೇಗೌಡನಿಗೆ ಇರತಕ್ಕಂಥ ನೋವಲ್ಲ. ಇದು ಸರ್ಕಾರದ ಸಮಸ್ಯೆ, ಈ ಸದನದ ಮುಂದೆ ನಾವು ಹೇಳಲಿಕ್ಕೆ ಇಚ್ಛಿಪಡುತ್ತೇನೆ. ಇದರ ಜೊತೆಗೆ ನಮ್ಮ ಸೆಕ್ರೆಟೇರಿಯಟ್ ಸ್ಟಾಫನವರು ಮೂರೂವರೆ ಸಾವಿರ ಜನ ಬಂದು ನಮ್ಮ ಚೀಫ್ ಸೆಕ್ರೆಟರಿ ಆಫೀಸ್ ಮುಂದೆ ಕುಳಿತುಕೊಳ್ಳುತ್ತಾರೆ. ನಾವು ಬಂದಾಗಲೇ ಬರಬೇಕೇ ಇವರೆಲ್ಲಾ. ಏಕೆಂದರೆ ಬಹಳ ಕಠಿಣವಾದ ಟೀಕೆ ಮಾಡಿದರೂ ಟೀಕೆ ಮಾಡಿಸಿಕೊಳ್ಳುತ್ತೇವೆ. ಕೊನೆಗೆ ಏನೋ ಒಂದು ಯೀಲ್ಡ ಆಗುತ್ತೇವೆ ಎಂದು. ಇನ್ನು ಈ ಪೌರ ಕಾರ್ಮಿಕರು, ನಾನು ಸದನಕ್ಕೆ ಬಂದು 30-35 ವರ್ಷಗಳಾದವು. ಇದು 33ನೇ ವರ್ಷ ಅಂತ ಇಟ್ಟುಕೊಳ್ಳೋಣ. ನನ್ನ ಪಾರ್ಲಿಮೆಂಟಿನ ಅವಧಿ 4 ವರ್ಷ ಬಿಡೋಣ. ಪೌರ ಕಾರ್ಮಿಕರಿಗೆ ನಾವು ನೇರವಾಗಿ ಸರ್ಕಾರದಿಂದ ಸಂಬಳ ಕೊಡಬೇಕು. ಅಲ್ಲಿ ಮುನಿಸಿಪಾಲಿಟಿಯವರು ಟ್ಯಾಕ್ಸ ವಸೂಲು ಮಾಡಲಿ ಅಥವಾ ಬಿಡಲಿ ಎಂದು ಹೇಳುತ್ತಾರೆ. ನಾವು ನೇರವಾಗಿ ಆ ಇಲಾಖೆಯ ಜವಾಬ್ದಾರಿ ಹೊತ್ತು ಕೆಲಸ ಮಾಡಬೇಕು. ಅವರು ಊರಿನ ಕಸ ಗುಡಿಸುವವರು. ಹೀಗೆ ಎಲ್ಲರೂ ಸರ್ಕಾರದ ಮೇಲೆ ಒತ್ತಡ ತಂದರೆ ಏನಾದರೂ ಆಗುತ್ತದೆ ಎನ್ನುವ ಭಾವನೆಗೆ ಬಂದಿದ್ದರೆ ಆದ್ದರಿಂದ ಈಗ ನಮ್ಮ ನೋವನ್ನು ನಿಮ್ಮ ಮುಂದೆ ಇಟ್ಟಿದ್ದೇನೆ ಅಷ್ಟೇನೇ. ತಾವು ಏನು ಹೇಳಿದಿರಿ, ಇವರುಗಳ ಬಗ್ಗೆ ಆಗಲೇ ನಮ್ಮ ವೃತ್ತಿ ಪರ ಶಿಕ್ಷಣದ್ದು, ಇದರಲ್ಲಿ ಕೆಲಸ ಮಾಡತಕ್ಕಂಥವರಿಗೆ ಈಗಾಗಲೇ ಒಂದು ಭರವಸೆ ಕೊಟ್ಟಿದ್ದಾರೆ, ನಮ್ಮ ಸಹೋದ್ಯೋಗಿಗಳಾಗಿರತಕ್ಕಂಥ ಗೋವಿಂದೇ ಗೌಡರು, ವಿಧಾನ ಪರಿಷತ್ತಿನಲ್ಲಿ. 10 ವರ್ಷ ಯಾರದು ಸೇವೆಯಾಗಿದೆ, ಅವರನ್ನು ಕನಫರ್ಮ ಮಾಡತಕ್ಕಂಥಾದ್ದಕ್ಕೆ ಒಂದು ಭರವಸೆ ಕೊಟ್ಟಿದ್ದಾರೆ. ಹಾಗೆ ಭರವಸೆ ಕೊಟ್ಟಿದ್ದರೂ, ಅವರು ಮುಷ್ಕರ ಮಾಡುತ್ತಿದ್ದಾರೆ ಎಂದರೆ ನಾವು ಅದಕ್ಕೆ ಏನೂ ಹೇಳಲಿಕ್ಕಾಗುವುದಿಲ್ಲ. ಈಗಲೂ ನಾನು ಸದನ ಮುಖೇನ ಅಪೀಲ್ ಮಾಡುತ್ತೇನೆ. let them call off their strike. 10 ವರ್ಷಗಳವರೆಗೆ ಸರ್ವೀಸ್ ಆಗಿರತಕ್ಕಂಥವರನ್ನು ಕನಫರ್ಮ ಮಾಡಬೇಕು ಎಂದು ಹೇಳಿ ಭರವಸೆ ಕೊಟ್ಟಿದೆ, ಈ ಸರ್ಕಾರ, ಈ ದಿಕ್ಕಿನಲ್ಲಿ ಕ್ರಮ ತೆಗೆದುಕೊಳ್ಳುತ್ತದೆ. I appeal to them, let them call off their strike.

ಶ್ರೀ ಜಿ.ವಿ. ಶ್ರೀರಾಮ ರೆಡ್ಡಿ : ಸನ್ಮಾನ್ಯ ಉಪಾಧ್ಯಕ್ಷರೇ, 10 ವರ್ಷಗಳಾಗಿರುವವರನ್ನು ಕನಫರ್ಮ್ ಮಾಡಬೇಕು ಎಂದು ಸುಪ್ರೀಮ ಕೋರ್ಟಿನ ನಿರ್ದೇಶನ ಇದೆ. ಅದಕ್ಕೆ ಸರ್ಕಾರ ಸುಪ್ರೀಮ ಕೋರ್ಟ ನಿರ್ದೇಶನದ ಪ್ರಕಾರ ಮಾಡಬೇಕಾಗುತ್ತದೆ, 10ವರ್ಷ ಆಗಿರುವವರಿಗೆ ಸರ್ಕಾರದ ಕಷ್ಟವೂ ನಮಗೆ ಗೊತ್ತಿದೆ. ಏಕೆಂದು ಹೇಳಿದರೆ2,116ಜನ ವೃತ್ತಿಪರ ಶಿಕ್ಷಣದಲ್ಲಿ ಕೆಲಸ ಮಾಡುತ್ತಿರತಕ್ಕಂಥವರು ಇದ್ದಾರೆ. ಆದರೆ ಬೇರೆ ಬೇರೆಯ ಲಕ್ಕಗಳು ಇವೆ. ಆ ಲೆಕ್ಕಗಳನ್ನು ಬಿಟ್ಟರೂ ಕೂಡ ಇವತ್ತು 2,000 ಜನ ಇದ್ದಾರೆ. 2,000 ಜನರನ್ನು ಒಟ್ಟಿಗೆ, ಸಾರಾಸಗಟಾಗಿ ಕನಫರ್ಮ ಮಾಡಬೇಕಾದರೆ ಸರ್ಕಾರಕ್ಕೆ ಬಹುಶಃ, ಒಂದು ವರ್ಷಕ್ಕೆ 12 ಕೋಟಿ ರೂಪಾಯಿ ಅವರಿಗೆ ಹೆಚ್ಚಿಗೆ ಖರ್ಚು ಮಾಡಬೇಕಾಗಿ ಬರುತ್ತದೆ ಎಂದು ಪ್ರಶ್ನೆ ಇದೆ. ಮತ್ತು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದಂಥ ಒಂದು ಪಾಯಿಂಟನ್ನೂ ಒಪ್ಪಬೇಕು, ಈ ಪ್ರೈವೇಟ್ ಕಾಲೇಜಿನ ಪರಿಸ್ಥಿತಿ ಏನಿದೆ, ಅದನ್ನು. ಅದೆಲ್ಲಾ ಈ ಶಿಕ್ಷಣದ ಅವ್ಯವಸ್ಥೆಯ ಒಂದು ಭಾಗ. ಅದನ್ನು ಇಲ್ಲಿ ಚರ್ಚೆ ಮಾಡತಕ್ಕಂಥಾದ್ದು ಬೇಡ.

ಶ್ರೀ ಹೆಚ್.ಡಿ. ದೇವೇಗೌಡ : ಇವರೆಲ್ಲರಿಗೂ ಸಂಬಳ ಕೊಡಬೇಕೆಂದು ಕೋರ್ಟಿನಲ್ಲಿ ಇನ್ನೊಂದು ಜಡ್ಜಮೆಂಟ್ಆಗಿದೆ. ಕೋರ್ಟಿನ ನ್ಯಾಯ ಎತ್ತಿಕೊಂಡು ಈಗ ಮಾತನಾಡುವುದಕ್ಕೆ ಹೋಗುವುದು ಬೇಡ. ಇನ್ನೊಂದು blanket order ಕೊಟ್ಟಿದ್ದಾರೆ, ಅದರಲ್ಲಿ ಸರ್ಕಾರದವರೇ ಎಲ್ಲರಿಗೂ ಸಂಬಳ ಕೊಡಬೇಕೆಂದು, ನಿಮ್ಮ ಜವಾಬ್ದಾರಿ ಎಂದು ಇದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಉಪಾಧ್ಯಕ್ಷರೆ, ವೃತ್ತಿಪರ ಶಿಕ್ಷಣ ಮೂಲತಃ ಕೇಂದ್ರ ಸರ್ಕಾರದ ಯೋಜನೆಯಲ್ಲಿ ಬಂದಿರತಕ್ಕಂಥದ್ದು. ಈ ಶಿಕ್ಷಣವನ್ನು ನಡೆಸುವುದಕ್ಕೆ ವರ್ಷಕ್ಕೆ ಇಂತಿಷ್ಟೆಂದು ಲಂಪಸಂ ಹಣ ಕೊಡುತ್ತಾರೆ. ಆದರೆ ಇದರ ಪರಿಸ್ಥಿತಿ ಏನು ಇದೆ ಎಂದರೆ ಅದು ಮ್ಯಾನೇಜಮೆಂಟ ಮಾಡತಕ್ಕಂಥವರು, ಎಲ್ಲರನ್ನು ಹಂತಹಂತವಾಗಿ ಖಾಯಂ ಮಾಡುತ್ತೇವೆ ಎನ್ನುವ ಭರವಸೆಯನ್ನು ಕೊಡಬೇಕು. ಎಲ್ಲರನ್ನೂ ಖಾಯಂ ಮಾಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳುವುದಾದರೆ ಹಂತಹಂತವಾಗಿಯಾದರೂ ಅವರನ್ನು ಖಾಯಂಗೊಳಿಸುತ್ತೇವೆ ಎನ್ನುವ ಭರವಸೆಯನ್ನು ಸರ್ಕಾರ ಕೊಟ್ಟು ಮಧ್ಯ ಪ್ರವೇಶಿಸಿ ಆ ಮುಷ್ಕರವನ್ನು ಹಿಂದಕ್ಕೆ ಪಡೆಯುವಂಥ ರೀತಿಯಲ್ಲಿ ಪ್ರಯತ್ನ ಮಾಡಬೇಕೆಂದು ನಾನು ತಮ್ಮ ಮೂಖಾಂತರ ಒತ್ತಾಯ ಮಾಡುತ್ತೇನೆ.

ಉಪಾಧ್ಯಕ್ಷರು : ಇದರ ಬಗ್ಗೆ ಸವಿಸ್ತಾರವಾಗಿ ಉತ್ತರವನ್ನು ಕೊಟ್ಟಿದ್ದಾರೆ. ಶೂನ್ಯವೇಳೆ ಇಲ್ಲಿಗೆ ಮುಕ್ತಾಯವಾಯಿತು. ಈಗ ಗಮನಸೆಳೆಯುವ ಸೂಚನೆಗಳು.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧಪಕ್ಷದ ನಾಯಕರು) : ಚಾಮರಾಜನಗರದಲ್ಲಿ ಯಾರೋ ಒಬ್ಬ ಅಸಿಸ್ಟೆಂಟ್ ಕಮಿಷನರ್‌ರವರು ವಿನಾಕಾರಣವಾಗಿ ಕೆಲವು ಷರತ್ತು ಹಾಕಿಕೊಂಡಿರುವುದರಿಂದ ಅಲ್ಲಿಯ ನಗರಸಭಾ ಸದಸ್ಯರು ಮತ್ತು ಇತರ ಐದು ಜನ ಮೈಸೂರಿನಲ್ಲಿ ಜೈಲಿನಲ್ಲಿದ್ದಾರೆ ಇದರ ಬಗ್ಗೆ ನಿನ್ನೆಯ ದಿವಸ ಮಾನ್ಯ ಅಧ್ಯಕ್ಷರು, ರವಿನ್ಯೂ ಸಚಿವರ ಮೂಲಕ ಉತ್ತರ ಕೊಡಿಸುತ್ತೇನೆಂದು ಹೇಳಿದರು.

ಉಪಾಧ್ಯಕ್ಷರು : ಆಮೇಲೆ ಈ ವಿಷಯವನ್ನು ಪ್ರಸ್ತಾಪ ಮಾಡಿ ಈಗ ವಾಟಾಳನಾಗರಾಜರವರು ಪ್ರಸ್ತಾಪ ಮಾಡಲಿ.

ಮಂತ್ರಿಗಳ ಹೇಳಿಕೆಗಳು

(ಅ) ನಾಗರಹೊಳೆ ರಾಷ್ಟ್ರೀಯ ಉದ್ಯಾನವನದಲ್ಲಿ ಬೆಂಕಿ.

ಶ್ರೀ ವಾಟಾಳ್ ನಾಗರಾಜ್ : ನಾಗರಹೊಳೆ ರಾಷ್ಟ್ರೀಯ ಉದ್ಯಾನವನದಲ್ಲಿ ಬೆಂಕಿ ಬಿದ್ದುದರ ಬಗ್ಗೆ ಸಚಿವರ ಹೇಳಿಕೆಯನ್ನು ಕೊಡಿಸಿ.

+ಶ್ರೀ ಹೆಚ್.ವೈ. ಮೇಟಿ (ಅರಣ್ಯ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ದಿನಾಂಕ : 28-02-1996ರಂದು ಶೂನ್ಯ ವೇಳೆಯಲ್ಲಿ ಚಾಮರಾಜನಗರ ಕ್ಷೇತ್ರದ ಮಾನ್ಯ ಶಾಸಕರಾದ ಶ್ರೀ ವಾಟಾಳ್ ನಾಗರಾಜ್‌ರವರು ನಾಗರಹೊಳೆ ರಾಷ್ಟ್ರೀಯ ಉದ್ಯಾನವನದಲ್ಲಿ ಬೆಂಕಿ ಸಂಭವಿಸಿರುವ ಬಗ್ಗೆ ಪ್ರಸ್ತಾಪಿಸಿರುವ ಬಗ್ಗೆ ಕೆಳಕಂಡಂತೆ ಹೇಳಿಕೆಯನ್ನು ಸದನದ ಮುಂದೆ ಇಡಲು ಬಯಸುತ್ತೇನೆ.

1996 ಫೆಬ್ರವರಿ ಮೊದಲನೆ ವಾರದಿಂದ ಪ್ರಾರಂಭವಾದ ಸಣ್ಣಪುಟ್ಟ ನೆಲಬೆಂಕಿಯ ಬಗ್ಗೆ ಮುಂಜಾಗ್ರತಾ ಕ್ರಮ ತೆಗೆದುಕೊಂಡಿದ್ದು, ಈ ಸಣ್ಣಪುಟ್ಟ ನೆಲ ಬೆಂಕಿಯಿಂದಾಗಿ ಯಾವುದೇ ಮರಗಳಿಗೆಹಾನಿಯಾಗಿರುವುದಿಲ್ಲ. ಈ ಅಭಯಾರಣ್ಯವು 64,300 ಹೆಕ್ಟೇರ್ ಪ್ರದೇಶವಿದ್ದು, ಅಲ್ಲಲ್ಲಿ ಸಣ್ಣಪುಟ್ಟ ನೆಲಬೆಂಕಿ ಕಾಣಿಸಿಕೊಂಡ ಕೂಡಲೇ ಎಲ್ಲಾ ಮುಂಜಾಗ್ರತಾ ಕ್ರಮವನ್ನು ತೆಗೆದುಕೊಳ್ಳಲಾಗಿರುತ್ತದೆ. ಈ ಅರಣ್ಯದಲ್ಲಿ ಇರುವ ಮರಗಿಡಗಳಿಂದ ಬೇಸಿಗೆಯ ಸಮಯದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಒಣಗಿದ ಎಲೆಗಳು ಉದುರುವುದಿದ್ದು, ಆಕಸ್ಮಿಕವಾಗಿ ಬೆಂಕಿ ಬೀಳುವ ಸಂಭವವಿರುತ್ತಿದ್ದು, ನೆಲ ಬೆಂಕಿಯಿಂದಾಗಿ ಯಾವುದೇ ಮರಗಳಿಗೆ ಮತ್ತು ಪ್ರಾಣಿಗಳಿಗೆ ಹಾನಿಯಾಗಿರುವುದಿಲ್ಲ. ಸಾಮಾನ್ಯವಾಗಿ ಈ ನೆಲ ಬೆಂಕಿಯು ಕಾಡಿನ ಹೊರ ಆವರಣದಲ್ಲಿ ಕಾಣಿಸಿಕೊಂಡಿರುತ್ತದೆ. ಅಭಯಾರಣ್ಯದ ಮುಖ್ಯ ಪ್ರದೇಶ (ಕೋರಎರಿಯಾ)ದಲ್ಲಿ ಯಾವುದೇ ಬೆಂಕಿ ಸಂಭವಿಸಿರುವುದಿಲ್ಲ. ಕಾಡಿನ ಬೆಂಕಿಯನ್ನು ಯಶಸ್ವಿಯಾಗಿ ತಡೆಗಟ್ಟಲು ಈ ಕೆಳಕಂಡ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.

(1) ಉದ್ಯಾನವನದ ರಸ್ತೆಯ ಎರಡೂ ಬದಿಯಲ್ಲಿ ಬಿದ್ದಿರುವ ಒಣಕಡ್ಡಿ ಮತ್ತು ಒಣಗಿದ ಮರದ ಎಲೆಗಳನ್ನು ಸುಟ್ಟುಹಾಕಿ ಬೆಂಕಿ ಮಾಡಲಾಗಿರುತ್ತದೆ. ಈ ಕ್ರಮದಿಂದ ಆಕಸ್ಮಿಕವಾಗಿ ಸಂಭವಿಸಬಹುದಾದ ಬೆಂಕಿಯನ್ನು ತಡೆಗಟ್ಟಲಾಗಿದೆ.

(2) ಸೂಕ್ಷ್ಮ ಪ್ರದೇಶಗಳನ್ನು ಗುರುತಿಸಿ ಅಂಥ ಪ್ರದೇಶಗಳಲ್ಲಿ ಬೆಂಕಿಯನ್ನು ತಡೆಗಟ್ಟುವ ಸಲುವಾಗಿ ವೀಕ್ಷಣಾ ಗೋಪುರಗಳನ್ನು ನಿರ್ಮಿಸಲಾಗಿರುತ್ತದೆ. ಈ ವೀಕ್ಷಣಾ ಗೋಪುರಗಳ ನಿರ್ವಹಣೆಗಾಗಿ ನಿಯೋಜಿಸಿರುವ ಸಿಬ್ಬಂದಿಗಳಿಗೆ ವಾಕೀ-ಟಾಕಿ ವ್ಯವಸ್ಥೆಯನ್ನು ಮಾಡಲಾಗಿದ್ದು, ಬೆಂಕಿ ಕಾಣಿಸಿಕೊಂಡ ಕೂಡಲೇ ಈ ಸಿಬ್ಬಂದಿಯವರು ವಾಕಿ-ಟಾಕಿ ಮೂಲಕ ಸಂಚಾರಿ ಜಾಗೃತ ದಳದವರಿಗೆ ವರದಿಯನ್ನು ರವಾನಿಸಿ ಈ ಸಂಚಾರಿ ದಳಗಳು ಕೂಡಲೇ ಅಂಥ ಸ್ಥಳಗಳಿಗೆ ಧಾವಿಸಿ ಎಲ್ಲ ಕ್ರಮಗಳನ್ನು ಜರುಗಿಸಿ ಬೆಂಕಿಯನ್ನು ಆರಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.